**ಓ.ಎಸ್. ನಂಃ 251/2013**
**ಪಿ.ಡಬ್ಲ್ಯೂಃ 1**

ದಿನಾಂಕಃ 14-11-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 10 ಹಾಗೂ 11 ನೇ ಪ್ರತಿವಾದಿಯರ ಪರ ಶ್ರೀ ಎನ್ ಆರ್ ಕೆ ವಕೀಲರಿಂದಃ**

ನಾನು ಅನಕ್ಷರಸ್ಥನಾಗಿರುತ್ತೇನೆ. ನಾನು ಈ ದಾವೆಯನ್ನು ಸರ್ವೆ ನಂ.610-611 ಸಂಬಂಧದ ಒಟ್ಟು 01 ಎಕರೆ 21 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ದಾಖಲಿಸಿರುತ್ತೇನೆ. ನನ್ನ ತಾತ ಗಣ್ಯಾ ರಾಠೋಡ್ ರವರಿಗೆ 03 ಗಂಡು ಹಾಗೂ 03 ಹೆಣ್ಣು ಸೇರಿದಂತೆ ಒಟ್ಟು 06 ಜನ ಮಕ್ಕಳಿದ್ದರು. ನನ್ನ ತಂದೆಗೆ ನಾವು 03 ಜನ ಗಂಡು ಹಾಗೂ 05 ಜನ ಹೆಣ್ಣು ಮಕ್ಕಳಿದ್ದೆವು. ನನಗೆ ನನ್ನ ಜನ್ಮ ದಿನಾಂಕ ಗೊತ್ತಿಲ್ಲ. ನನಗೆ ಈಗ ಸುಮಾರು 38 ರಿಂದ 40 ವರ್ಷ ವಯಸ್ಸಾಗಿದೆ. 1994-95 ರಲ್ಲಿ ನಿಮಗೆ ಕೇವಲ 8-10 ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿಯು ಸರಿಯಲ್ಲ, ಆಗ ನನಗೆ 20ರ ಮೇಲ್ಪಟ್ಟು ವಯಸ್ಸಾಗಿತ್ತು ಎಂದು ನುಡಿಯುತ್ತಾರೆ. 1994-95 ರಲ್ಲಿ 4 ರಿಂದ 8 ನೇ ಪ್ರತಿವಾದಿಯರು ಸುಮಾರು 12 ರಿಂದ 15 ವರ್ಷ ವಯಸ್ಸಿನವರಾಗಿದ್ದರು. ಸದರಿ ಅವದಿಯಲ್ಲಿ ಎಲ್ಲಾ 08 ಜನ ಮಕ್ಕಳು ಅಪ್ರಾಪ್ತ ವಯಸ್ಕರಾಗಿದ್ದರಿಂದ ನಿಮ್ಮ ತಂದೆಯೇ ಕುಟುಂಬದ ಹಿರಿಯಾರಾಗಿದ್ದರು ಹಾಗೂ ನಿಮ್ಮ ಪಾಲನೆ ಪೋಷಣೆ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಸರಿಯಲ್ಲ, ಆಗ ನಾವು ದೊಡ್ಡವರಾಗಿದ್ದೆವು ಹಾಗು ನಮ್ಮನ್ನು ನಾವು ನೋಡಿಕೊಳ್ಳುತ್ತಿದ್ದೆವು ಎಂದು ನುಡಿಯುುತ್ತಾರೆ. ಸಾಕ್ಷಿಯು ಮುಂದುವರೆದು ನಾವು ಬೆಂಗಳೂರು-ಬಾಂಬೆಗೆ ಹೋಗಿ ದುಡಿದು ನನ್ನ ತಂದೆಗೆ ಹಣ ತಂದು ಕೊಡುತ್ತಿದ್ದೆವು ಎಂದು ನುಡಿಯುತ್ತಾರೆ. ನಾನು ಬೆಂಗಳೂರು-ಬಾಂಬೆಯಲ್ಲಿ ಕೂಲಿ ಕೆಲಸಗಾರರನ್ನು ಕರೆದುಕೊಂಡು ರಸ್ತೆ ಹಾಗೂ ಕಟ್ಟಡ ಕಾಮಗಾರಿ ಮಾಡುತ್ತಿದ್ದೆನು. ನಾನು ಗುತ್ತಿಗೆ ಪರವಾನಿಗೆ ಹೊಂದಿಲ್ಲ ಆದರೆ ಗುತ್ತಿಗೆದಾರರ ಅಡಿಯಲ್ಲಿ ಕೆಲಸ ಮಾಡುತ್ತಿದ್ದೆನು. ಆಗ ನಾನು ತಿಂಗಳಿಗೆ ರೂ.10-12 ಸಾವಿರ ಹಣ ಸಂಪಾದಿಸುತ್ತಿದ್ದೆನು. ಸದರಿ ಹಣವನ್ನು ನನ್ನ ಕುಟುಂಬ ನಿರ್ವಹಣೆಗಾಗಿ ನನ್ನ ಹತ್ತಿರವೇ ಇಟ್ಟುಕೊಳ್ಳುತ್ತಿದ್ದೆನು, ಬ್ಯಾಂಕಿನಲ್ಲಿ ಜಮಾ ಮಾಡುತ್ತಿರಲಿಲ್ಲ. 1994-95 ರಲ್ಲಿ ನನ್ನ ಮದುವೆ ಆಗಿರಲಿಲ್ಲ. ನಿಮ್ಮ ಅಕ್ಕ-ತಂಗಿಯರ ಮದುವೆಗಳನ್ನು ನಿಮ್ಮ ತಂದೆಯೇ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ, ನಾನು ಹಾಗೂ ನನ್ನ ಅಣ್ಣ 2 ನೇ ಪ್ರತಿವಾದಿ ದುಡಿದು ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ

ಸರಿಯಲ್ಲ. ನಿಮ್ಮ ಕುಟುಂಬ ನಿರ್ವಹಣೆಗಾಗಿ ನಿಮ್ಮ ತಂದೆ ದಾವಾ ಸರ್ವೆ ನಂ.610-611 ರ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆ ಮಾರಾಟ ಮಾಡಿಲ್ಲ ಆದರೆ ದಡಂಗೆ ಹಾಗೂ ಇತರರು ನಮ್ಮ ತಂದೆಯ ಸಹಿ ಪಡೆದು ಖೊಟ್ಟಿ ದಾಖಲೆ ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ದಿಃ 07.04.1995 ರಂದು ಸದರಿ ದಾವಾ ಜಮೀನಿನ ಪೈಕಿ 20 ಗುಂಟೆಯನ್ನು 9 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಂತರ ದಿಃ 01.08.2007 ರಂದು 9 ನೇ ಪ್ರತಿವಾದಿ ಸದರಿ 20 ಗುಂಟೆ ಜಮೀನನ್ನು 10 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ದಿಃ 07.04.1995 ರಂದು ಸರ್ವೆ ನಂ.610-611 ರ ಪೈಕಿ 20 ಗುಂಟೆ ಜಮೀನನ್ನು 11 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

2. ನಿಮ್ಮ ತಂದೆ ಜಮೀನು ಮಾರಾಟ ಮಾಡಿರುವ ವಿಷಯ ನಿಮಗೆ ಯಾವಾಗ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿಯು ಈಗ ಸುಮಾರು 12-14 ವರ್ಷಗಳಿಂದ ಹಿಂದೆ ಗೊತ್ತಾಗಿದೆ ಎಂದು ನುಡಿಯುತ್ತಾರೆ. ಆ ನಂತರ ಈ ದಾವೆ ದಾಖಲು ಮಾಡಿರುತ್ತೇವೆ. ದಾವಾ ಅನುಸೂಚಿ 2 ರ ಸರ್ವೆ ನಂ.505/3 ಹಾಗೂ ದಾವಾ ಅನುಸೂಚಿ 3 ರ ಸರ್ವೇ ನಂ.610-611 ರ ಜಮೀನುಗಳನ್ನು ನಮ್ಮ ತಂದೆ ತಮ್ಮ ಸ್ವಂತ ಆದಾಯದಿಂದ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವು ದುಡಿದು ಜಮೀನುಗಳನ್ನು ನಮ್ಮ ತಂದೆಯ ಹೆಸರಿನಲ್ಲಿ ಖರೀದಿ ಮಾಡಿದ್ದೆವು ಎಂದು ನುಡಿಯುತ್ತಾರೆ. 9 ರಿಂದ 11 ನೇ ಪ್ರತಿವಾದಿಯರು ಖರೀದಿ ಪತ್ರದ ದಿನಾಂಕದಿಂದ ದಾವಾ ಜಮೀನಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸದರಿಯವರೇ ಖರೀದಿಸಿದ ಜಮೀನಿನ ಮಾಲಿಕರು ಹಾಗೂ ಕಬ್ಜೆದಾರರಾಗಿದ್ದರೂ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

3. ಅಶೋಕ ನಗರದ ಸರ್ವೆ ನಂ.171/ಆ ರಲ್ಲಿನ 02 ಎಕರೆ 29 ಗುಂಟೆ ಜಮೀನು ನಮ್ಮ ಕುಟುಂಬದ ಹಿರಿಯರ ಆಸ್ತಿಯಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ನನ್ನ ತಂದೆ ಹಾಗೂ ಆತನ ಇಬ್ಬರು ಸಹೋದರರ ಹೆಸರಿನಲ್ಲಿ ಇದೆ ಎಂದು ನುಡಿಯುತ್ತಾರೆ. ಸರ್ವೆ ನಂ.610/611/ಊ ರಲ್ಲಿನ 04 ಗುಂಟೆ ಜಮೀನು ನಿಮ್ಮ

ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಸರಿ, ನಾನು ಖರೀದಿ ಮಾಡಿದ್ದೆನು ಎಂದು ನುಡಿಯುತ್ತಾರೆ. ಅದೇ ರೀತಿ ಅಶೋಕ ನಗರದ ಮನೆ ನಂ.2-50 ರಲ್ಲಿನ ಹಿಟ್ಟಿನ ಗಿರಿಣಿಯೂ ಸಹ ನನ್ನ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಮನೆ ನಂ.2-14 ರ ಆಸ್ತಿ 3 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ಸದರಿ ಅಶೋಕ ನಗರದ ನಾಲ್ಕು ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿಯು ನನ್ನ ವಕೀಲರು ಸೇರಿಸಿಲ್ಲ ಎಂದು ನುಡಿಯುತ್ತಾರೆ. ಸದರಿ ಎರಡು ಮನೆಗಳನ್ನು ಹಾಗೂ 04 ಗುಂಟೆ ಆಸ್ತಿಯನ್ನು ನನ್ನ ತಂದೆ ನಮ್ಮ ಹೆಸರುಗಳಲ್ಲಿ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವುಗಳು ನಮ್ಮ ಸ್ವಂತ ಆಸ್ತಿ ಆಗಿರುತ್ತವೆ ಎಂದು ನುಡಿಯುತ್ತಾರೆ. ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆ ನಮ್ಮೆಲ್ಲರ ಮದುವೆ ಮಾಡಲು ಹಾಗೂ ಕುಟುಂಬದ ನಿರ್ವಹಣೆಗಾಗಿ ದಾವಾ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 10 ಹಾಗೂ 11 ನೇ ಪ್ರತಿವಾದಿಯರಿಂದ ಹೆಚ್ಚಿನ ಹಣ ಪಡೆದುಕೊಳ್ಳುವ ಉದ್ದೇಶದಿಂದ ನಾನು ಹಾಗೂ 1 ರಿಂದ 8 ನೇ ಪ್ರತಿವಾದಿಯರು ಸೇರಿಕೊಂಡು ಈ ಸುಳ್ಳು ದಾವೆ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ.

4. ದಾವಾ ಆಸ್ತಿಗಳು ಹಿರಿಯರ ಆಸ್ತಿಗಳು ಆಗಿರುವುದನ್ನು ತೋರಿಸಲು ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿಯು ಅದು ನನ್ನ ವಕೀಲರಿಗೆ ಗೊತ್ತು ಎಂದು ನುಡಿಯುತ್ತಾರೆ. ನಾನು ಬೆಂಗಳೂರು-ಬಾಂಬೆ ಯಲ್ಲಿ ದುಡಿದು ನನ್ನ ತಂದೆಗೆ ಹಣ ಕೊಟ್ಟಿದ್ದೆನು ಎಂದು ಹಾಗೂ ಸದರಿ ಹಣದಿಂದ ನನ್ನ ತಂದೆ ದಾವಾ ಆಸ್ತಿ ಖರೀದಿ ಮಾಡಿದ್ದಾರೆಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

12 ರಿಂದ 18 ನೇ ಪ್ರತಿವಾದಿಯರ ಪರ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.

ಮರು ವಿಚಾರಣೆಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ